doc-413
T-P-2

(1)

R No KRNN 12 8-12-197

in ★ ★ ★ ★ ★
58 th Year
ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಕಕ್ಷಿಕೆ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರವಿರತ ಎಂ. ಎಸ್. ಕೃಷ್ಣರಾವ್ [3 ಪೈಸೆ

ತಮಿಳುನಾಡಿನಲಿ ಹಸಿವೆಯಿಂದ ಮರಣ

೧

ಕಾರ್ಪೊರೇಷನ್ ಅಡಳಿತ

ಬೆಂಗಳೂರು— ಈ ತಿಂಗಳು ಕಡೆಗೆ ಚುನಾಯಿತ ಕಾರ್ಪೊರೇಷನ್ ಅವಧಿ ಮುಗಿಯುವುದರಿಂದ ಅದಕ್ಕೆ ಜೀವದಾನ ಮಾಡಿ, ಸರಕಾರ ವಹಿಸಿಕೊಂಡು ಅಡ್ಮಿನಿಸ್ಟ್ರೇಟರನ್ನು ನೇಮಿಸುವ ಸಂಭವ ಹೆಚ್ಚಾಗಿದೆ.

★

ಮಾತುಕತೆಗೆ ಏನೂ ವಿಚಾರವಿಲ್ಲ

ಬೊಂಬಾಯಿ— ಶ್ರೀ ಜಯಪ್ರಕಾಶ ನಾರಾಯಣರೊಡನೆ ಮಾತುಕತೆ ನಡೆಸಲೇನೊಂದೂ ವಿಚಾರವಿಲ್ಲವೆಂದು ಪ್ರಧಾನಿ ಇಂದಿರಾರವರು ಒಂದು ಸಪ್ತಾಹಿಕ ಪತ್ರಿಕೆಗೆ ಕೊಟ್ಟ ಸಂದರ್ಶನದಲ್ಲಿ ತಿಳಿಸಿದರು

ಚಿನ್ನದ ಮೊರಾಟು

ವಾಷಿಂಗ್ಟನ್– ಅಮೇರಿಕಾವು ತನ್ನ ಅಧಿಕೃತ ದಾಸ್ತಾನಿನಿಂದ ಜನವರಿ 6 ರಂದು 2 ಮಿಲಿಯ ಔನ್ಸು ಮೊರುವುದಾಗಿ ಖಜಾನಿ ಕಾರ್ಯದರ್ಶಿ ವಿಲಿಯಂ ಸೈಮ್ಸ್ ಪ್ರಕಟಿಸಿರುವರು.

★

ವೃದ್ಧಾಪ್ಯ ಪೆನ್ಷನ್

ಬೆಂಳಗಾಂ— ಈ ವಿಭಾಗದಲ್ಲಿ ವೃದ್ಧಾಪ್ಯ ಪೆನ್ಷನ್ 1000 ಮಂದಿಗೆ ತಿಂಗಳಿಗೂ 30 ರಂತೆ ಕೊಡಲಾಗುತ್ತಿದೆ ಎಂದು ವಿಭಾಗಾಧಿಕಾರಿಯವರು ಪತ್ರಿಕೆಯವರಿಗೆ ತಿಳಿಸಿದರು.

ಸಕ್ಕರೆ ರಾಷ್ಟ್ರೀಕರಣ

ನವದೆಹಲಿ— ಕಾಂಗ್ರೆಸ್ ಮತ್ತು ಕಮ್ಯುನಿಸ್ಟು ಪಾರ್ಟಿಯ 257 ಪಾರ್ಲಿಮೆಂಟು ಸದಸ್ಯರು ಸಕ್ಕರೆ ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಲು ಪ್ರಧಾನಿ ಇಂದಿರಾರಿಗೆ ಮನವಿಪತ್ರ ಅರ್ಪಿಸಿದರು.

★

ಹೊಟ್ಟೆಗಿಲ್ಲದೆ ಸಾವು

ಮದರಾಸು— ರಾಮನಾಥಪುರದಲ್ಲಿ ಅಭಾವ ಪರಿಸ್ಥಿತಿಯಿಂದ 10 ರಿಂದ 20 ಮಂದಿಯವರೆಗೆ ಹೊಟ್ಟೆಗಿಲ್ಲದೆ ಸತ್ತಿರುವರೆಂದು ಕಮ್ಯುನಿಸ್ಟು ಎಂ. ಪಿ. ಕಲ್ಯಾಣ ಸುಂದರಂ ಆಪಾದಿಸುವರು.

★

ಅಪಾರ ಸಿಮೆಂಟು ದುರುಪಯೋಗ

ಬೆಂಗಳೂರು— ನಗರ ಸಭೆಗೆ ಸೇರಿದ ಲಕ್ಷಾಂತರ ರೂ.ಗಳ ಬೆಲೆಯ ಸಿಮೆಂಟು ಕಂಟ್ರಾಕ್ಟರುಗಳು, ಅಧಿಕಾರಿಗಳ ಮತ್ತು ಕೆಲವು ಶಾಸಕರ ಲಕ್ಷ್ಯಲಕ್ಷದಿಂದ ದುರುಪಯೋಗವಾಗಿದೆ ಎಂದು ಕಳೆದ ವರ್ಷ ನೇಮಿಸಲಾಗಿದ್ದ ತ್ರಿಸದಸ್ಯ ಸಮಿತಿ ತನ್ನ ವರದಿಯಲ್ಲಿ ತಿಳಿಸಿದೆ.

★

ಸೆನೇಟಿಗೆ ಚುನಾವಣೆ

ಮೈಸೂರು— ವಿಶ್ವವಿದ್ಯಾಲಯದ ಸೆನೇಟಿನ ಸದಸ್ಯರಾದವರ ಕ್ಷೇತ್ರದ ಚುನಾವಣೆಯು ಜನವರಿ 3 ರಂದು ನಡೆಯಲಿದೆಯೆಂದು ತಿಳಿಯುಬಂದಿದೆ.

★

ರೈತರ ಕೇಳಿಕೆ

ಕಲಘಟ್ಟ— ಈ ತಾಲ್ಲೂಕಿನ ಭಾರಿಗುಂಪು ತಹಸೀಲ್ದಾರರ ಕಚೇರಿ ಮುಂದೆ ಇತ್ತೀಚೆಗೆ ಪ್ರದರ್ಶನ ನಡೆಸಿ, 6 ಎಕ್ರೆಗೆ ಕಡಮೆ ಭೂಮಿ ಹೊಂದಿರುವವರಿಗೆ ಲೆವಿ ವಿನಾಯಿತಿ ಕೊಡಬೇಕೆಂದೂ, ಲೆವಿ ಭತ್ತಕ್ಕೆ ಕ್ವಿಂಟಾಲ್‌ಗೆ ರೂ. 120 ಕ್ಕೆ ಹೆಚ್ಚಿಸಬೇಕೆಂದೂ ಕೇಳಿಕೆ ಹಾಕಿದರು.

ನಟರಾಜ ವಿಗ್ರಹಕ್ಕೆ ಮೊಕದ್ದಮೆ

ಅಮೇರಿಕಾ ಜಿಲ್ಲಾ ಕೋರ್ಟಿನಲ್ಲಿ ಭಾರತದಿಂದ ಕದ್ದ ಪ್ರಖ್ಯಾತ ಶಿವಪುರ ನಟರಾಜ ವಿಗ್ರಹವನ್ನು ಕೊಂಡಿರುವ ಕೋಟ್ಯಾಧೀಶ ನಾರ್ಟನ್ ಸೈಮನ್ ಮೇಲೆ 1.5 ಮಿಲಿಯ ಡಾಲರುಗಳಿಗೆ ಭಾರತ ಸರಕಾರವು ದಾವಾ ಮಾಡಿದೆ ಮತ್ತು ವಿಗ್ರಹ ವಾಪಸ್ಸಿಗೆ ಕೇಳಿದೆ ; ವಿಗ್ರಹ ವಾಪಸ್ಸು ಮಾಡದಿದ್ದರೆ ಮತ್ತೆ 2.5 ಮಿಲಿಯ ಡಾಲರುಗಳಿಗೆ ಕೇಳಿಕೆಹಾಕಿದೆ.

★

ಪೋಲೀಸು ನಾಯಿಗಳು

ಬೆಂಗಳೂರು— ಪೋಲೀಸು ನಾಯಿಗಳ ತಂಡವನ್ನು ಹೆಚ್ಚಿಸಲು ಸರಕಾರ ಯೋಚಿಸಿದೆ.

★

ದುರದೃಷ್ಟ

ಸ್ಪೇನ್ ಪೋರ್ಟ್‌ನ ಪ್ರಾಣಿಸಂಗ್ರಹಾಲಯದಿಂದ 2 ಸಿಂಹಗಳನ್ನು ಬಂಧನದಿಂದ ಬಿಡುಗಡೆ ಮಾಡುವ ಇಚ್ಛೆಯಿಂದ ಒಬ್ಬ ಯುವಕನು ಪಂಜರದೊಳಕ್ಕೆ ಜಾರಿದಾಗ ಸಿಂಹಗಳು ಇವನನ್ನು ಕೊಂದವು.

★

ಹಿಮರಾಶಿಗೆ ಬಲಿ

ಶ್ರೀನಗರ– ಜಮ್ಮು ಕಡೆಯಿಂದ ಬನಿಹಾಳ್ ಸುರಂಗಮಾರ್ಗದಲ್ಲಿ ಬಿದ್ದ ಹಿಮವನ್ನು ಇಬ್ಬರು ಸ್ವಚ್ಛಗೊಳಿಸುತ್ತಿದ್ದಾಗ ಪಿರ್ ಪಂಜಾಲ್ ಪರ್ವತದಿಂದ ಬಂದ ಭಾರಿ ಹಿಮರಾಶಿಯಿಂದ ಮೃತಪಟ್ಟರು.

★

ಜಗದ್ಗುರುಗಳ ಟೀಕೆ

ಒರಿಸ್ಸಾ ಸರಕಾರವು ಮಠಗಳ, ದೇವಾಲಯಗಳ ಮತ್ತು ಧಾರ್ಮಿಕ ಸಂಸ್ಥೆಗಳ ಆಸ್ತಿಗಳನ್ನು ರದ್ದು ಪಡಿಸಿರುವ ಬಗ್ಗೆ ಕಂಚಿ ಜಗದ್ಗುರುಗಳು ಕಟುವಾಗಿ ಟೀಕಿಸಿ ಇವಕ್ಕೆ ದಾನವಾಗಿ ಬಂದ ಆಸ್ತಿಗಳ ಮೇಲೆ ಸರ್ಕಾರದ ಕೈಹಾಕುವಿಕೆಯು ಅಪಚಾರವೆಂದಿರುವರು.

ಪ್ರಕಟಣೆ

ವಿಷಯ — ಮೈಸೂರು ಕುಕ್ಕರಹಳ್ಳಿ ಕೆರೆ ಪ್ರದೇಶದಲ್ಲಿ ಸೊಪ್ಪು ಅದನ್ನು ತೆಗೆದುಹಾಕುವುದು.

1) ಕುಕ್ಕರಹಳ್ಳಿ ಕೆರೆಯಲ್ಲಿ ಬೆಳೆದಿರುವ ಹೈಯಾಸಿಂತ್ ಸೊಪ್ಪು ತೆಗೆದುಹಾಕುವ ಮತ್ತು ಅವುಗಳನ್ನು ನೀರಿನ ಅಂಚಿನಿಂದ ಐವತ್ತು ಗಜಗಳ ದೂರದಲ್ಲಿ ಒಟ್ಟುವ ಕೆಲಸಕ್ಕೆ ದಿನಾಂಕ 10-12-74 ರ ಸಂಜೆ 4 ಗಂಟೆಯ ವರೆಗೆ ಕಂಟ್ರಾಕ್ಟರುಗಳಿಂದ ಸೀಲ್ ಮಾಡಿದ ಟೆಂಡರುಗಳನ್ನು ಸ್ವೀಕರಿಸಲಾಗುವುದು.

2) ಕೆಲಸದ ಆಜ್ಞೆ ನೀಡಿದ ಒಂದು ತಿಂಗಳಲ್ಲಿ ಕೆಲಸವನ್ನು ಪೂರೈಸತಕ್ಕದ್ದು.

3) ಕಛೇರಿಯ ನೋಟೀಸ್ ಬೋರ್ಡಿನ ಮೇಲೆ ಕೆಲಸದ ವಿವರಗಳನ್ನೊಳಗೊಂಡಂತೆ ನಿಬಂಧನೆ ಮತ್ತು ಷರತ್ತುಗಳನ್ನು ಪ್ರಕಟಿಸಲಾಗಿದೆ.

4) ಟೆಂಡರುಗಳನ್ನು ಸಲ್ಲಿಸಿದಲ್ಲಿ ಕೆಲಸದ ಷರತ್ತುಗಳನ್ನು ತಿಳಿದು ಒಪ್ಪಿಕೊಳ್ಳಲಾಗಿದೆ ಎಂದು ಭಾವಿಸಲಾಗಿದೆ. ನಿಗದಿ ಪಡಿಸಲಾದ ರೂ. 100-00 ಠೇವಣಿಯ ಹಣವನ್ನು ಟೆಂಡರುಗಳು ಒಳಗೊಂಡಿರಬೇಕು. ಆ ಠೇವಣಿಯ ಹಣವನ್ನು ಟ್ರೆಷರಿ ಚಲನ್ ರೂಪದಲ್ಲಿದ್ದು ಅದನ್ನು ಮೈಸೂರು ಸರ್ಕಾರದ ಖಜಾನೆಯ ಯಾವುದೇ ವಿಭಾಗದಲ್ಲಿ ಕೆಲಸದ ಹೆಸರನ್ನು ನಮೂದಿಸಿ (ಕುಕ್ಕರಹಳ್ಳಿ ಕೆರೆಯಲ್ಲಿ ಹೈಯಾಸಿಂತ್ ತೆಗೆದುಹಾಕುವುದು) ಮೈಸೂರು ವಿಶ್ವವಿದ್ಯಾನಿಲಯ ನಿಧಿಗಳು ಎಂಬ ಲೆಕ್ಕಕ್ಕೆ ಜಮಾ ಮಾಡತಕ್ಕದ್ದು. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಇಲ್ಲವೇ ವಿಶ್ವವಿದ್ಯಾನಿಲಯದಿಂದ ಜಾಕೆ ಇರುವ ಹಣಕ್ಕೆ ಭರ್ತಿ ಮಾಡಿಕೊಳ್ಳಬೇಕೆಂಬ ಬೇಡಿಕೆಯನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ಸಹಿ/– ಕೆ. ಎಲ್. ಮಲ್ಲಿಗೇಗೌಡ,
ತೋಟಗಾರಿಕೆ ಇಲಾಖೆಯ ಅಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು–6

ಡಾ ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ ! ಎಂ. ಸಿ ಮೋದಿಯವರು ತಾ ॥ 12 ರಂದ್ ಬಿಜಾಪುರದಲ್ಲಿ ನೇತ್ರ ಚಿಕಿತ್ಸಾ ಶಿಬಿರ ನಡೆಸುವರು.

ನಲ್ಲಿಯಲ್ಲಿ ಹಾಲು

ನವದೆಹಲಿ— ಇಲ್ಲಿಯ ಜನತೆಗೆ ನಲ್ಲೀ ಮೂಲಕ ಸಿಕ್ಕುವುದು - ಗುಂಡಿ ಒತ್ತಿದರೆ ಹಾಗೆ ಹಾಲು ಸಿಕ್ಕುವ 4 ಕ್ಷೀರ ಕೇಂದ್ರಗಳಿವೆ – ದೇಶದ ಇತರ 200 ಕಡೆಗಳಲ್ಲಿ ಈ ರೀತಿ ಏರ್ಪಡಿಸಲು ಯೋಜಿಸಲಾಗಿದೆ

॥

ಪ್ರತಿಭಟನಾ ಮೆರವಣಿಗೆ

ಬೆಳಗಾಂ– ಸರಕಾರದಲ್ಲಿನ ಭ್ರಷ್ಟಾಚಾರ ಪ್ರತಿಭಟಿಸಿ ಜನಸಂಘದ ಸ್ಥಳೀಯ ಶಾಖೆ ಮೆರವಣಿಗೆ ನಡೆಸಿತು.

ಶಾಸನಸಭೆಗೆ ಪತ್ರಿಕೋದ್ಯೋಗಿಗಳ ಬಹಿಷ್ಕಾರ

ಪಾಟ್ನಾ— ಶಾಸನ ಸಭೆಯಲ್ಲಿ ಪತ್ರಿಕೆಗಳು ಮತ್ತು ವರದಿಗಾರರ ಬಗ್ಗೆ ಮುಖ್ಯ ಮಂತ್ರಿ ಅಗೌರವಾಗಿ ಮಾತಾಡಿದುದನ್ನು ಪ್ರತಿಭಟಿಸಿ ಸಭೆಗಳಿಂದ ವರದಿಗಾರರು ಹೊರಬಂದರು – ಮುಖ್ಯಮಂತ್ರಿಯವರು ಕ್ಷಮಾಪಣೆ ಬೇಡುವವರೆಗೆ ಸಭೆಗಳನ್ನು ಬಹಿಷ್ಕರಿಸಲು ನಿರ್ಧರಿಸಿದರು

ಕಾಂಗ್ರೆಸ್ ಸ್ಪರ್ಧಿಸುವುದು

ಬೆಂಗಳೂರು— ಇನ್ನು ಮುಂದೆ ಕಾಂಗ್ರೆಸ್ಸು ಎಲ್ಲಾ ಪೌರಸಭಾ ಚುನಾವಣೆಗಳಲ್ಲೂ ಸ್ಪರ್ಧಿಸಲು ಕೆ ಪಿ ಸಿ ಸಿ ಕಾರ್ಯಕಾರಿ ಸಮಿತಿ ನಿರ್ಧರಿಸಿತು.

ವುಡ್‌ಲಾಂಡ್ 6 12 74 ರಿಂದ

ಅವೋಘ 5 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ ೫ ಪ್ರದರ್ಶನಗಳು

ಅ ಪೆ ರಾ 29 11 74 ರಿಂದ

ಪಾತಾಳ ಬೈರವಿ

ಎನ್ ಟಿ ರಾಮರಾವ್ ರೇಲಂಗಿ ಗಿರಿಜ ಇವರ ಅಭಿನಯದಿಂದ ಕೂಡಿದ

ಅನೋಘ ತೆಲುಗು ಚಿತ್ರ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ



Protect the Cow

A Superb Tonic

Quality Printing Neat Binding

Lakshminarasimha Press

Sivarampet, Mysore 1

Contribute Liberally

to the National Defence Fu

Help The Gorakshana

— Humanitarian Propaganda Monthly —

Edited Printed and Published by Dharmapracharanirata M S. Krishna Rao (Proprietor) at the Satwadi Press, Chamarajapuram, Mysore